ದಿನಾಂಕ: 12-09-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀಸವಾಲು: ಶ್ರೀ ಎ ಎ ಜಿ ವಕೀಲರಿಂದ :-**

1. ನನ್ನ ಸ್ವಂತ ಊರು ಮಿಂಚೇರಿ, ನಾನು ವಿದ್ಯಾಭ್ಯಾಸ ಮಾಡಿಲ್ಲ. ಮಿಂಚೇರಿ ಗ್ರಾಮದ ಜಮೀನುಗಳ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ನನಗೆ ಮಾವನಾಗಬೇಕು. ವಾದಿ ಕೆಂಚಪ್ಪ ಮತ್ತು ಇತರರ ಮೇಲೆ ಕೇಸ್ ಹಾಕಿದ್ದಾನೆ. ಪ್ರತಿವಾದಿ ಯಾವ ಕಾರಣಕ್ಕೆ ಕಿರಿ ಕಿರಿ ಮಾಡುತ್ತಿದ್ದ ಗೊತ್ತಿಲ್ಲ. ನನಗೆ ಯರಡೋಣಿಯ ಚನ್ನಬಸ್ಸಪ್ಪ ಗೊತ್ತಿಲ್ಲ. ಮೌನೇಶ್ ತಂದೆ ಹನುಮಂತಪ್ಪ ಸಾ: ಲಿಂಗಸೂಗೂರು ನನಗೆ ಗೊತ್ತಿಲ್ಲ. ನಾನು ಮಿಂಚೇರಿಯಲ್ಲಿ ಮೌನೇಶನಿಗೆ ಹೊಲವನ್ನು ತೋರಿಸಿಲ್ಲ. ನನ್ನ ಮೇಲೆ, ವಾದಿ ಮತ್ತು ವಾದಿಯರ ಹೆಂಡತಿಯ ಮೇಲೆ ಯರಡೋಣಿಯ ಚನ್ನಬಸವ ತಂದೆ ವಿರುಪಾಕ್ಷಗೌಡ ಪಾಟೀಲ ಅವರು ಕೇಸ್ ಮಾಡಿದ ಬಗ್ಗೆ ಗೊತ್ತಿಲ್ಲ.

2. ವಾದಿ ಮಿಂಚೇರಿಯಲ್ಲಿ ಸರಸ್ವತೆಮ್ಮನಿಂದ ಹೊಲ ಖರೀದಿಸಿರುತ್ತಾನೆ. 4-5 ವರ್ಷದ ಹಿಂದೆ ಜಮೀನು ಖರೀದಿಸಿರುತ್ತಾನೆ. ಆ ಸಮಯದಲ್ಲಿ ಸರಸ್ವತೆಮ್ಮ, ರಾಮಲಿಂಗ, ಅಮರೇಶ, ಖಾಜಾಸಾಬ, ಚಂದಾಸಾಬ ಇವರೆಲ್ಲ ಹೊಲ ತೆಗೆದುಕೊಳ್ಳುವಾಗ ಬಂದಿದ್ದರು. ಹೊಲದಲ್ಲಿ ಏನೂ ಮಾತುಕತೆಯಾಯಿತು ನನಗೆ ಗೊತ್ತಿಲ್ಲ. ನಾನು ಯಾವುದೇ ಕಾಗದ ಪತ್ರವನ್ನು ನೋಡಿಲ್ಲ ಸರಸ್ವತೆಮ್ಮ ಸಬ್ ರಜಿಸ್ಟರ್ ಆಫಿಸಿಗೆ ಕರೆದಿದ್ದರು ಅಲ್ಲಿ ಹೋಗಿ ಸಹಿ ಮಾಡಿರುತ್ತೇನೆ. ನನ್ನ ಎದುರಿಗೆ ದುಡ್ಡು ಕೊಟ್ಟಿದ್ದು ತೆಗೆದುಕೊಂಡಿದ್ದು ನೋಡಿಲ್ಲ, ನನ್ನ ಎದುರಿಗೆ ಹೊಲ ಅಳತೆ ಮಾಡಿದ್ದು ಬಿತ್ತನೆ ಮಾಡಿದ್ದು ನೋಡಿಲ್ಲ. ಖಾಜಾಹುಸೇನಿಗೆ ಈ ದಾವಾದ ಆಸ್ತಿಯನ್ನು ಬಿಟ್ಟು ಮಿಂಚೇರಿಯಲ್ಲಿ ಬೇರೆ ಆಸ್ತಿಗಲು ಇಲ್ಲ ಎಂದರೆ ಸರಿ. ಖಾಜಹುಸೇನಿ ಊರು ಮರಗಟನಾಳ ಎಂದರೆ ಸರಿ.ಮಿಂಚೇರಿಯಿಂದ 10-12 ಕಿ ಮಿ ದೂರ ಇದೆ. ಪ್ರಮಾಣ ಪತ್ರದಲ್ಲಿ ಸಾಕ್ಷಿ ಹೇಳುತ್ತೇನೆಂದು ಬರೆಸಿದ್ದೇನೆ ಅದನ್ನು ಬಿಟ್ಟು ಬೇರೆ ಏನೂ ಬರೆಸಿಲ್ಲ. ಖಾಜಾಹುಸೇನಿ ಮತ್ತು ಸರಸ್ವತೆಮ್ಮ ಹಾಗೂ ಕೆಂಚಪ್ಪ ಮತ್ತು ಸರಸ್ವತೆಮ್ಮ ಮದ್ಯೆ ಏನೂ ವ್ಯವಹಾರ ಆಗಿವೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಖಾಜಾಹುಸೇನಿ ಸರಸ್ವತೆಮ್ಮನಿಗೆ ಹಣ ಕೊಟ್ಟಿಲ್ಲ, ಕೆಂಚಪ್ಪನ

ಸ್ವಾಧೀನದಲ್ಲಿರುವ ಆಸ್ತಿಯನ್ನು ಪಡೆದುಕೊಳ್ಳಬೇಕೆಂದು ಖೊಟ್ಟಿ ಖರೀದಿ ಪತ್ರ ಮಾಡಿಸಿಕೊಂಡಿದ್ದಾನೆಂದರೆ ಸರಿಯಲ್ಲ. ನಾನು ಮತ್ತು ಖಾಜಾಹುಸೇನಿ ಮಿಲಾಪೆಯಾಗಿ ಚನ್ನಬಸವನ ಕಡೆಯಿಂದ 21 ಲಕ್ಷ ರೂಪಾಯಿಗೆ ಮಾರಾಟ ಮಾಡಿ 20 ಲಕ್ಷ ರೂಪಾಯಿ ನಗದು ಪಡೆದುಕೊಂಡಿದ್ದೇವೆಂದರೆ ಸರಿಯಲ್ಲ. ಈ ಎಲ್ಲಾ ವಿಷಯ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.
ಸಹಿ/-
( ಚಂದ್ರಶೇಖರ ಪಿ. ದಿಡ್ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು,
ಲಿಂಗಸೂಗುರು.

ದಿನಾಂಕ: 12–09–2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು: ಶ್ರೀ ಎ ಎ ಜಿ ವಕೀಲರಿಂದ :-**

1. ನನಗೆ ಖಾಜಾಹುಸೇನಿ ಗೊತ್ತು. ಆತ ಒಕ್ಕಲುತನ ಮಾಡುತ್ತಾನೆ. ವಾದಿ ಸಾಕ್ಷಿ ಹೇಳಲು ಕರೆದಿದ್ದಕ್ಕೆ ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ. ಈ ಮೊದಲು ಮಿಂಚೇರಿಯಲ್ಲಿ ಹೊಲ ನೋಡಲು ಖಾಜಾಹುಸೇನಿ ಕರೆಸಿರುತ್ತಾನೆ. ಮಿಂಚೇರಿಯಿಂದ ದಾವಾದ ಆಸ್ತಿ 2 ಕಿ ಮಿ ದೂರ ಇದೆ. ನಾನು ಹೊಲಕ್ಕೆ ಹೋದಾಗ ಸರಸ್ವತೆಮ್ಮ ಮತ್ತು ಆಕೆಯ ಮಗ ಬಸಲಿಂಗಪ್ಪ ಇದ್ದರು. ನಾನು ಹೊಲ ನೋಡಿ ಬಂದ ಮೇಲೆ ಮಾತುಕತೆಯಾಗಿರುತ್ತದೆ. ಮಾತುಕತೆಯಾಗುವ ಪೂರ್ವದಲ್ಲಿ ನಾನು 3–4 ಸಾರಿ ಹೊಲ ನೋಡಲು ಹೋಗಿರುತ್ತೇನೆ. ಹೊಲ ಯಾವಾಗ ಖರೀದಿಯಾಯಿತು ನನಗೆ ಗೊತ್ತಿಲ್ಲ. ಖರೀದಿ ಪತ್ರದಲ್ಲಿ ಬರೆದ ವಿಷಯ ಗೊತ್ತಿಲ್ಲ ಆದರೆ ಖರೀದಿ ಪತ್ರ ಆಗಿದ್ದು ನಿಜ ಖರೀದಿ ಕರಾರು ಆದ ಎಷ್ಟು ದಿನಕ್ಕೆ ಖರೀದಿಯಾಯಿತು ನನಗೆ ಗೊತ್ತಿಲ್ಲ. ನಾನು ಪ್ರತಿವಾದಿಯನ್ನು ನೋಡಿಲ್ಲ. ನಾನು ಕೆಂಚಪ್ಪನ ಅಣ್ಣ ತಮ್ಮಂದಿರನ್ನು ನೋಡಿಲ್ಲ. ನಾನು ಹೊಲಕ್ಕೆ ಹೋದಾಗ ಕೆಂಚಪ್ಪ ಇರಲಿಲ್ಲ. ನನಗೆ ಚಕ್ ಬಂದಿ ಹೇಳಲು ಬರುವುದಿಲ್ಲ. ವಾದಿ ಆಸ್ತಿ ಖರೀದಿಸುವಾಗ ಸಜ್ಜೆ ಬೆಳೆ ಬೆಳೆದಿದ್ದರು. ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಎಷ್ಟು ಕೇಸ್ ಗಳಿವೆ ಅಂತಾ ಗೊತ್ತಿಲ್ಲ. ಈ ಕೆಸ್ ನ್ನು ಯಾರು ಯಾರ ಮೇಲೆ ಹಾಕಿದ್ದಾರೆ ಗೊತ್ತಿಲ್ಲ. ವಾದಿ ಸಾಕ್ಷಿ ಹೇಳಲು ಬಾ ಅಂದಿದ್ದಕ್ಕೆ ಬಂದಿದ್ದೇನೆಂದರೆ ಸರಿ.

**ಮರು ವಿಚಾರಣೆ: ಇಲ್ಲ.**
(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.
ಸಹಿ/-
( ಚಂದ್ರಶೇಖರ ಪಿ. ದಿಡ್ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು,
ಲಿಂಗಸೂಗುರು.